ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಇತರೆ ರಾಜ್ಯಗಳ ಮಾಹಿತಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ    ದಿನಾಂಕ : DATE: 13/02/2020

### ಮಹಾರಾಷ್ಟ್ರದಲ್ಲಿ ವಾರಕ್ಕೆ 5 ದಿನ ಮಾತ್ರ ಕೆಲಸ

ಮುಂಬೈ: ಮಹಾರಾಷ್ಟ್ರದಲ್ಲಿ ಇನ್ಮುಂದೆ ಸರ್ಕಾರಿ ಕಚೇರಿಗಳು ವಾರದಲ್ಲಿ ಐದು ದಿನ ಮಾತ್ರ ಕಾರ್ಯನಿರ್ವಹಿಸುತ್ತವೆ. ಹೀಗಾಗಿ ನಿತ್ಯದ ಕೆಲಸದ ಅವಧಿಯನ್ನು 45 ನಿಮಿಷ ವಿಸ್ತರಣೆ ಮಾಡಲಾಗಿದೆ. ಇದು ಫೆ. 29ರಿಂದ ಜಾರಿಗೆ ಬರಲಿದೆ. ಈ ನಿರ್ಧಾರವನ್ನು ಮುಖ್ಯಮಂತ್ರಿ ಉದ್ಧವ್ ಠಾಕ್ರೆ ನೇತೃತ್ವದ ಸಂಪುಟ ಸಭೆ ಕೈಗೊಂಡಿದೆ. ಇದರಿಂದ ಉದ್ಯೋಗಿಗಳ ಜೀವನಮಟ್ಟ ಉತ್ತಮವಾಗುವುದರ ಜತೆಗೆ ಪೆಟ್ರೋಲ್, ಡೀಸೆಲ್ ಮತ್ತು ವಿದ್ಯುತ್ ಉಳಿತಾಯವಾಗುತ್ತದೆ ಎಂದು ಉದ್ಧವ್ ಠಾಕ್ರೆ ಹೇಳಿದ್ದಾರೆ. ಕಳೆದ ಕೆಲ ವರ್ಷಗಳಿಂದ ಸರ್ಕಾರಿ ಉದ್ಯೋಗಿಗಳು ಐದು ದಿನಗಳ ಕೆಲಸಕ್ಕಾಗಿ ಆಗ್ರಹಿಸುತ್ತಿದ್ದರು. ಉದ್ಯೋಗಿಗಳು ಸದ್ಯ ಬೆಳಗ್ಗೆ 9.45ರಿಂದ ಸಂಜೆ 5.30ರ ವರೆಗೆ ಕೆಲಸ ನಿರ್ವಹಿಸುತ್ತಾರೆ. ನೂತನ ನಿಯಮಾವಳಿಗಳ ಪ್ರಕಾರ ಇನ್ಮುಂದೆ ಬೆಳಗ್ಗೆ 9.45ರಿಂದ ಸಂಜೆ 6.15ರ ವರೆಗೆ ಕೆಲಸ ನಿರ್ವಹಿಸಬೇಕಾಗುತ್ತದೆ. ಮಧ್ಯಾಹ್ನ 1 ರಿಂದ 2 ಗಂಟೆ ನಡುವೆ ಅರ್ಧ ಗಂಟೆ ಕಾಲ ಊಟದ ಬಿಡುವು ಪಡೆಯಬಹುದು ಎಂದು ಸರ್ಕಾರ ತಿಳಿಸಿದೆ.